ಸಾಕ್ಷಿಯನ್ನು ದಿನಾಂಕಃ **25.10.2024** ರಂದು ಕರೆದು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ವಾದಿಯರ ಪರ ಶ್ರೀ.ಎ.ಎಸ್ ವಾಯ್ ವಕೀಲರಿಂದಃ

ನಮ್ಮ ಮತ್ತು ವಾದಿಯರ ಮನೆತನದ ಹಿರಿಯರ ನಡುವೆ ವಾಟ್ನಿ ಆಗಿತ್ತು ಎಂದರೆ ಸರಿ. ಸದರಿ ವಾಟ್ನಿಯಲ್ಲಿ ದಾವಾ ಆಸ್ತಿಗಳು ವಾದಿ ನಂ.1 ರವರ ತಂದೆಯಾದ ಸತ್ಯಪ್ಪ ಇವನ ಪಾಲಿಗೆ ಬಂದಿದ್ದವು ಎಂದರೆ ಸರಿ. ಸತ್ಯಪ್ಪ ಇವನು ಜೀವಂತ ಇರುವವರೆಗೆ ದಾವಾ ಜಮೀನುಗಳನ್ನು ತನ್ನ ಸ್ವಾಧೀನತೆಯಲ್ಲಿಟ್ಟುಕೊಂಡು ಉಪಯೋಗ ಮಾಡುತ್ತಿದ್ದನು ಎಂದರೆ ಸರಿ. ಈ ದಾವಾ ಆಸ್ತಿಗಳು ವಾದಿ ನಂ.1 ರಿಂದ 3 ರವರ ಹಿಸ್ಸೆಯಲ್ಲಿ ಇರುತ್ತವೆ ಎಂದರೆ ಸರಿ. ಸದರಿ ವಾಟ್ನಿಯಲಲ್ಲಿ ನಮ್ಮ ತಂದೆ ಪಾಲಿಗೆ ಮೇಟುಗುಡ್ಡ ಗ್ರಾಮದ ರಿ.ಸ.ನಂ.187 ಕ್ಷೇತ್ರ 04 ಎಕರೆ 33 ಗುಂಟೆ ಜಮೀನು ಬಂದಿತ್ತು. ಅದೇ ರೀತಿ ಸದರಿ ವಾಟ್ನಿಯಲ್ಲಿ 08 ಗುಂಟೆ, 14 ಗುಂಟೆ. 21 ಗುಂಟೆ ಜಮೀನುಗಳು ನಮ್ಮ ತಂದೆಯ ಪಾಲಿಗೆ ಬಂದಿದ್ದವು.

ನಮ್ಮ ತಂದೆಯ ಇನ್ನೊಬ್ಬ ಸಹೋದರನಾದ ಶಾಸಪ್ಪ ಇವನ ಪಾಲಿಗೆ 04 ಎಕರೆ 31 ಗುಂಟೆ ಜಮೀನು ಬಂದಿತ್ತು ಮತ್ತು ಇನ್ನೊಂದು ಜಮೀನದಲ್ಲಿ 08 ಗುಂಟೆ ಜಮೀನು ಪಾಲಿಗೆ ಬಂದಿತ್ತು. ಸದರಿ ವಾಟ್ನಿ 1963 ನೇ ಸಾಲಿನಲ್ಲಿ ಆಗಿತ್ತು ಎಂದರೆ ಸರಿ. ವಾಟ್ನಿ ನಂತರ ತಮ್ಮ ತಮ್ಮ ಪಾಲಿಗೆ ಬಂದ ಜಮೀನುಗಳನ್ನು ನಮ್ಮ ಹಿರಿಯರು ಮತ್ತು ನಮ್ಮ ಹಿರಿಯರು ತೀರಿಕೊಂಡ ನಂತರ ನಾವುಗಳು ಸಾಗುವಳಿ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ನಮ್ಮ ನಮ್ಮ ಪಾಲಿಗೆ ಬಂದ ಜಮೀನಗಳಿಗೆ ಸಂಬಂದಿಸಿದಂತೆ ನಮ್ಮಲ್ಲಿ ಮತ್ತು ವಾದಿಯರಿಗೆ ಮಾಲೀಕತ್ವದ ಮತ್ತು ಸ್ವಾಧೀನತೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ.

ಈ ದಾವೆ ದಾಖಲಾಗುವುದಕ್ಕಿಂತ ಮುಂಚೆ ನಮ್ಮ ನಮ್ಮ ಪಾಲಿಗೆ ಬಂದ ಜಮೀನದ ಹದ್ದಿನ ಬಗ್ಗೆ ಯಾವುದಾದರೂ ನಮ್ಮ ಮತ್ತು ವಾದಿಯರ ಮದ್ಯ ತಕರಾರು ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಏನು ಇರಲಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ದಾಖಲು ಆಗವುದಕ್ಕಿಂತ ಮುಂಚೆ ನಮ್ಮ ನಮ್ಮ ಪಾಲಿಗೆ ಬಂದ ಜಮೀನುಗಳ ಕ್ಷೇತ್ರವು ಕಡಿಮೆ ಇರುತ್ತದೆ ಎಂದು ನಮ್ಮ ಮತ್ತು ವಾದಿಯರ ಮದ್ಯ ತಕರಾರು ಇತ್ತು. ಆ ಕಾಲದಲ್ಲಿ ನಾವು ವಾದಿಯರಿಗೆ ಕ್ಷೇತ್ರ ದುರಸ್ತಿ ಆಗುವವರೆಗೆ ಜಮೀನುಗಳನ್ನು ಸಾಗುವಳಿ ಮಾಡಬೇಡಾ ಅಂತಾ ತಕರಾರು ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ವಾದಿಯರು ದಾವಾ ಜಮೀನುಗಳನ್ನು ಸಾಗುವಳಿ ಮಾಡಲಿಕ್ಕೆ ನಾವು ತಕರಾರು ಮಾಡುತ್ತಿದ್ದೇವೆ ಎಂದು ಸದರಿ ದಾವೆಯನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾವು ತಕರಾರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಪಾಲಿಗೆ ಬಂದ ಜಮೀನದ ಸ್ವಾಧೀನತೆಗೆ ವಾದಿಯರು ತಕರಾರು ಮಾಡಿರುವುದಿಲ್ಲ.

ಈ ದಾವೆಯಲ್ಲ್ಲಿ ಮಾಗಣಿ ಮಾಡಿ ನಾನು ವಾದಿಯರ ವಿರುದ್ದ ಕೌಂಟರ ಕ್ಲೇಮನ್ನು ಮಾಡಿರುವುದಿಲ್ಲ. ನಮ್ಮ ನಮ್ಮ ಪಾಲಿಗೆ ಬಂದ ಜಮೀನುಗಳ ಕ್ಷೇತ್ರಗಳ ಬಗ್ಗೆ ನಮ್ಮ ಮತಮ್ತು ವಾದಿಯರ ಮದ್ಯ ಎ.ಡಿ.ಎಲ್.ಆರ್ ಮತ್ತು ಡಿ.ಡಿ.ಎಲ್.ಆರ್ ಕಚೇರಿಗಳಲ್ಲಿ ಪ್ರಕರಣದ ಚಾಲ್ತಿಯಲ್ಲಿರುತ್ತವೆ ಎಂದರೆ ಸರಿ.

ನಾವು ವಾದಿಯರ ದಾವಾ ಜಮೀನುಗಳ ಸ್ವಾಧೀನತೆಗೆ ತಕರಾರು ಮಾಡಿದ್ದರಿಂದ ವಾದಿಯರು ಈ ದಾವೆಯನ್ನು ನಮ್ಮ ಮೇಲೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾವು ವಿನಾಃಕಾರಣ ವಾದಿಯರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ